# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್ ಬಿ.ಜಿ.ಎಂ–2444/2019/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 05/12/2019.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ವಿಭೂತಿ ಗ್ರಾಮವು ಪುನರ್ವಸತಿ ಗ್ರಾಮವಾಗಿರುವುದರಿಂದ ಆಸ್ತಿ ನಂ. 306 ರಲ್ಲಿ 200 X 100 ಅಡಿ ನಿವೇಶನವನ್ನು ಶಾಲೆಗಾಗಿ ಕಾಯ್ದಿರಿಸಿದ್ದು ಸದರಿ ಮೀಸಲಿಟ್ಟ ಜಾಗದಲ್ಲಿಯೇ ಶಾಲೆಯನ್ನು ನಿರ್ಮಿಸಲು ನಿಯಮಾನುಸಾರ ಅಗತ್ಯ ಕ್ರಮ ಜರುಗಿಸಿ ಕೈಗೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸುವ ಕುರಿತು.

*****

1. ಶ್ರೀ ಕುತುಬುದ್ದಿನ್ ಸೈಪನಸಾಬ ಮುಲ್ಲಾ, ವಿಭೂತಿಹಳ್ಳಿ ಗ್ರಾಮ ಮತ್ತು ಅಂಚೆ, ಸಿಂದಗಿ ತಾಲ್ಲೂಕು, ವಿಜಯಪುರ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು (1) ಶ್ರೀ ರಾಮನಗೌಡ ಬಿ. ಬಿರಾದಾರ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ರಾಮನಳ್ಳಿ ಗ್ರಾಮ ಪಂಚಾಯಿತಿ, ಸಿಂದಗಿ ತಾಲ್ಲೂಕು, ವಿಜಯಪುರ ಜಿಲ್ಲೆ, (2) ಶ್ರೀ ಎಸ್.ಹೆಚ್. ಬಿರಾದಾರ, ಮುಖ್ಯ ಗುರುಗಳು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ,

N. [signature]

ವಿಭೂತಿಹಳ್ಳಿ, ಸಿಂದಗಿ ತಾಲ್ಲೂಕು, ವಿಜಯಪುರ ಜಿಲ್ಲೆ, (3) ಶ್ರೀ ಹೆಚ್.ಎಸ್. ನಗನೂರು, ಕ್ಷೇತ್ರ ಶಿಕ್ಷಣಾಧಿಕಾರಿ, ಸಿಂದಗಿ ತಾಲ್ಲೂಕು, ವಿಜಯಪುರ ಜಿಲ್ಲೆ, (4) ಶ್ರೀ ವೈಜಣ್ಣ, ಕಾರ್ಯ ನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಸಿಂದಗಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರುಗಳ ವಿರುದ್ಧ ದೂರು ಸಲ್ಲಿಸಿ ತನಿಖೆ ಕೈಗೊಳ್ಳಲು ಕೋರಿರುತ್ತಾರೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ).

2. ದೂರಿನ ಸಾರಾಂಶ:–

ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ವಿಭೂತಿಹಳ್ಳಿ ಪುನರ್ ವಸತಿ ಕೇಂದ್ರದಲ್ಲಿ "2017–18 ನೇ ಸಾಲಿನ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಥಿಲಗೊಂಡಿರುವ ಕೊಠಡಿಗಳನ್ನು ನೆಲಸಮಗೊಳಿಸಿ ಮರು ನಿರ್ಮಾಣ ಅನುದಾನ" ಅಡಿಯಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕೊಠಡಿ ನಿರ್ಮಾಣವು 8.70 ಲಕ್ಷ ರೂಪಾಯಿ ಅನುದಾನದಲ್ಲಿ ಮಂಜೂರಾದ ಕಾಮಗಾರಿಗಳಿಗೆ ಆಡಳಿತಾತ್ಮಕ ಮಂಜೂರಾತಿ ದೊರಕಿದ್ದು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ. ಪುನರ್ ವಸತಿ ಕೇಂದ್ರದಲ್ಲಿ ಶಾಲೆಗಾಗಿ ಸುಮಾರು ಒಂದು ಎಕರೆಗಿಂತ ಹೆಚ್ಚು ವಿಸ್ತೀರ್ಣವಾದ ಜಾಗ ಮೀಸಲಿದ್ದು ಇಡೀ ಜಾಗವನ್ನು ಕಬಳಿಸಲು ಯತ್ನಿಸುತ್ತಿರುವುದಲ್ಲದೇ ವಿಭೂತಿಹಳ್ಳಿ ಗ್ರಾಮದಲ್ಲಿ ನಿರ್ಮಾಣಕ್ಕೆ ಮಂಜೂರಾದ ಶಾಲಾ ಕೊಠಡಿಯನ್ನು ಮತ್ತೊಂದು ಜಾಗದಲ್ಲಿ ನಿರ್ಮಿಸಲು ತಯಾರಿ ನಡೆಸಿರುತ್ತಾರೆ. ವಸತಿ ಯೋಜನೆಗಾಗಿ ಇರುವ ಜಾಗದಲ್ಲಿ ಕೇವಲ 80 ಫೀಟ್ ಅಗಲ 150 ಫೀಟ್ ಉದ್ದ ಕಿರಿದಾದ ನಿವೇಶನದಲ್ಲಿ ಶಾಲಾ ಕಟ್ಟಡ ನಿರ್ಮಿಸುವಂತೆ ಗುತ್ತಿಗೆದಾರರಿಗೆ ಒತ್ತಡ ಹೇರುತ್ತಿದ್ದಾರೆ. ಈ ಬಗ್ಗೆ ಎಲ್ಲಾ ಅಧಿಕಾರಿಗಳಿಗೂ ಲಿಖಿತ ಮನವಿ ಸಲ್ಲಿಸಿ ಶಾಲೆಗಾಗಿ ಮೀಸಲಿರುವ ಜಾಗದಲ್ಲಿಯೇ ಶಾಲಾ ಕಟ್ಟಡ ನಿರ್ಮಿಸುವಂತೆ ಅರ್ಜಿ ಸಲ್ಲಿಸಿರುತ್ತಾರೆ. ದಿನಾಂಕ: 03/08/2019 ರಂದು ಶಾಲೆಗಾಗಿ ಮೀಸಲಿರುವ ಜಾಗವನ್ನು ಬಿಟ್ಟು ಬೇರೊಂದು ಜಾಗದಲ್ಲಿ ಜೆ.ಸಿ.ಬಿ. ಯಂತ್ರದ ಮೂಲಕ ತಳಪಾಯ ಅಗೆದಿದ್ದು ದಿನಾಂಕ: 13/08/2019

ರಂದು ಕಟ್ಟಡಕ್ಕಾಗಿ ಕಲ್ಲುಗಳನ್ನು, ಖಡಿ, ಮರಳು ಸೇರಿದಂತೆ ಕಟ್ಟಡ ಸಾಮಗ್ರಿಗಳನ್ನು ಸಂಗ್ರಹಿಸಿರುತ್ತಾರೆ.

ಸಂಬಂಧಿಸಿದ ಅಧಿಕಾರಿಗಳು ಕರ್ತವ್ಯ ಲೋಪವೆಸಗಿದ್ದು ಕೃತ್ಯವನ್ನು ತಡೆಯುವಲ್ಲಿ ವಿಫಲರಾಗಿದ್ದಲ್ಲದೇ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಮಾಡುವ ಕೃತ್ಯದಲ್ಲಿ ಪರೋಕ್ಷವಾಗಿ ಶಾಮೀಲಾಗಿರುತ್ತಾರೆ.

ಶಾಲೆಗಾಗಿ ಮೀಸಲಿರುವ ಅತ್ಯಂತ ವಿಸ್ತಾರವಾದ ಜಾಗದಲ್ಲಿ ಒಂದು ಮೂಲೆಯಲ್ಲಿ 15 X 30 ಫೀಟ್ ವಿಸ್ತೀರ್ಣದ ದೇವಸ್ಥಾನ ಇದ್ದು ಶಾಲೆಯನ್ನು ನಿರ್ಮಿಸಬಹುದಾದರೂ ದೇವಸ್ಥಾನದ ನೆಪ ಹೇಳಿ ಗ್ರಾಮದ ಕೆಲವರು ಬಂಡವಾಳ ಹೂಡಿಕೆ ಮಾಡಿ ಕಲ್ಯಾಣ ಮಂಟಪ (Marriage hall) ನಿರ್ಮಿಸಿಕೊಂಡು ಲಾಭದಾಯಕ ದಂಧೆ ನಿರ್ಮಿಸಿಕೊಳ್ಳುವ ದುರುದ್ದೇಶ ಹೊಂದಿರುತ್ತಾರೆ. ಸರಕಾರಿ ಜಾಗವನ್ನು ದುರ್ಬಳಕೆ ಮಾಡಿಕೊಂಡು ದೇವಸ್ಥಾನದ ಹೆಸರನ್ನು ಬಳಸಿಕೊಂಡು ಗ್ರಾಮದ ಹಿತಾಸಕ್ತಿ ಬಲಿ ಕೊಟ್ಟಿರುತ್ತಾರೆ. ಶಾಲೆ ಕಟ್ಟಡವನ್ನು ಕಾನೂನುಬಾಹಿರವಾಗಿ ನಿರ್ಮಿಸುತ್ತಿದ್ದು ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಲು ವಿನಂತಿಸಿ ದೂರು ಸಲ್ಲಿಸಿರುತ್ತಾರೆ.

ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

3. 1ನೇ ಎದುರುದಾರರ ಆಕ್ಷೇಪಣೆಗಳು:-

ವಿಜಾಪೂರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ರಾಮನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯೆಂದು ಕರ್ತವ್ಯ ನಿರ್ವಹಿಸಿರುತ್ತೇನೆ. ವಿಭೂತಿಹಳ್ಳಿ ಪುನರ್ವಸತಿ ಕೇಂದ್ರದ ಶಾಲೆಗಾಗಿ ನಿಗದಿಪಡಿಸಿದ ನಿವೇಶನದ ಜಾಗೆಯ ನಮೂನೆ-ನಂಬರ್ 09 ರಲ್ಲಿ ಲೇ-ಔಟ್ ಪ್ರಕಾರ ಎಂಟ್ರಿ ಮಾಡಿರುವುದಿಲ್ಲ. ಈ ಹಿಂದೆ ರಾಮನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ವಿ.ಎಸ್. ಕಬಾಡೆ ಇವರು ಪುನರ್ವಸತಿ ಕೇಂದ್ರದ ಲೇ-ಔಟ್‌ನಲ್ಲಿ

ಶಾಲೆಗಾಗಿ ನಿಗದಿಪಡಿಸಿದ ನಿವೇಶನವನ್ನೆ ನಮೂನೆ– ನಂಬರ್ 09 (ಆಸ್ತಿ ರಜಿಸ್ಟರ್) ರಲ್ಲಿ ದಾಖಲು ಮಾಡಿ ಸಂಬಂಧಿಸಿದ ಅಧಿಕಾರಿಗಳಿಗೆ ನಿವೇಶನದ ಉತಾರೆ (ಆಸ್ತಿ ದಾಖಲು) ಶಾಲೆ ಕಟ್ಟಡ ನಿರ್ಮಾಣದ ಮುಂದಿನ ಪ್ರಕ್ರಿಯೆಗಾಗಿ ಕೊಟ್ಟಿದ್ದು ಆಸ್ತಿ ನಂಬರ್ 306 ಇರುತ್ತದೆ. ವಸತಿ ಯೋಜನೆಗಾಗಿ ಕಾಯ್ದಿರಿಸಿದ ನಿವೇಶನಗಳಲ್ಲಿ ಶಾಲಾ ಕಟ್ಟಡ ನಿರ್ಮಿಸಲು ಯಾವುದೇ ರೀತಿ ಸಹಕಾರ ನೀಡಿರುವುದಿಲ್ಲ. ಸಾರ್ವಜನಿಕರಿಗೆ ನಿಗದಿಪಡಿಸಿದ ನಿವೇಶನಗಳಲ್ಲಿ ಶಾಲಾ ಕಟ್ಟಡ ಕಾಮಗಾರಿ ನಡೆದಿರುವುದಿಲ್ಲ ಎಂದು ನಮೂದಿಸಿರುತ್ತಾರೆ.

4. 2ನೇ ಎದುರುದಾರರ ಆಕ್ಷೇಪಣೆಗಳು:–

ವಿಭೂತಿಹಳ್ಳಿ ಪುನರ್ ವಸತಿ ಗ್ರಾಮದಲ್ಲಿ ಸರಕಾರಿ ಶಾಲೆಗಾಗಿ ಮೀಸಲಿಟ್ಟ ಜಾಗದ ಆಸ್ತಿ ಸಂಖ್ಯೆ 306, 200 X 100 ಅಡಿ ನಿವೇಶನ ಕಾಯ್ದಿರಿಸಲಾಗಿದ್ದು, ಈ ಜಾಗದಲ್ಲಿ ಶಾಲಾ ಕಟ್ಟಡ ನಿರ್ಮಾಣ ಮಾಡಲು 2017–18ನೇ ಸಾಲಿನಲ್ಲಿ ಶಾಲಾ ಕೊಠಡಿ ಮಂಜೂರಾಗಿದ್ದು, ಗ್ರಾಮಸ್ಥರ ವೈಮನಸ್ಸಿನಿಂದ ಕಟ್ಟಡ ನಿರ್ಮಾಣವಾಗದೆ ಹಾಗೆಯೇ ಉಳಿದಿದೆ. ಶಾಲೆಗೆ ಕಾಯ್ದಿರಿಸಿದ ಜಾಗದಲ್ಲಿ ಬೇಗನೆ ಕಟ್ಟಡ ನಿರ್ಮಾಣ ಮಾಡಲು ಕ್ರಮ ಕೈಗೊಂಡು ಶಾಲಾ ಮಕ್ಕಳಿಗೆ ಹೋಗಿ ಬರಲು ಆಗುತ್ತಿರುವ ತೊಂದರೆಯನ್ನು ಪರಿಹರಿಸಬೇಕೆಂದು ಹಾಗೂ ಮಕ್ಕಳು 2 ಕಿ.ಮೀ. ನಡೆದುಕೊಂಡು ಬರಬೇಕಾಗಿದ್ದು ಶೈಕ್ಷಣಿಕ ಹಿತದೃಷ್ಠಿಯಿಂದ ಸರ್ಕಾರಿ ಶಾಲೆಗಾಗಿ ಕಾಯ್ದಿರಿಸಿದ ಜಾಗದಲ್ಲಿ ಬೇಗನೆ ಶಾಲಾ ಕೋಣೆ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಬೇಕೆಂದು ನಮೂದಿಸಿರುತ್ತಾರೆ.

5. 3ನೇ ಎದುರುದಾರರ ಆಕ್ಷೇಕಪಣೆಗಳು:–

2017–18 ನೇ ಸಾಲಿನಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ವಿಭೂತಿಹಳ್ಳಿ ಶಾಲೆಗೆ ಒಂದು ಕೊಠಡಿ ಮಂಜೂರಾಗಿದೆ. ವಿಭೂತಿಹಳ್ಳಿ ಗ್ರಾಮವು ಪುನರ್ವಸತಿ ಗ್ರಾಮವಾಗಿರುವುದರಿಂದ ಪುನರ್ವಸತಿ ಗ್ರಾಮದಲ್ಲಿ ಶಾಲೆಗಾಗಿ ಆಸ್ತಿ ನಂ. 306 ರಲ್ಲಿ 200 X 100 ಅಡಿ ನಿವೇಶನವನ್ನು ಶಾಲೆಗಾಗಿ ಕಾಯ್ದಿರಿಸಲಾಗಿದೆ. ಗ್ರಾಮದ ಕೆಲವರು ಶಾಲೆಗಾಗಿ ಮೀಸಲಿಟ್ಟ ಜಾಗದಲ್ಲಿ 15 X 30 ಫೂಟ್ ಅಂದಾಜು ಅಳತೆಯ ಜಾಗದಲ್ಲಿ

ಶ್ರೀ ಶರಣಬಸವೇಶ್ವರ ದೇವಸ್ಥಾನವನ್ನು ನಿರ್ಮಿಸಿದ್ದು, ಪೂರ್ತಿ ಜಾಗವನ್ನು ದೇವಸ್ಥಾನದ ಅಭಿವೃದ್ಧಿಗೋಸ್ಕರ ಮೀಸಲಿಟ್ಟು ಶಾಲೆಯ ಕೊಠಡಿಯನ್ನು ಪುನರ್ವಸತಿ ಗ್ರಾಮದಲ್ಲಿ ಖಾಲಿ ಇರುವ ಸರಕಾರಿ ಜಾಗೆಯಲ್ಲಿ ಕಟ್ಟಡ ಕಟ್ಟುವಂತೆ ಒತ್ತಾಯಿಸಿರುತ್ತಾರೆ.

ಶಾಲೆಯ ಮಕ್ಕಳ ಹಿತದೃಷ್ಟಿಯಿಂದ ಮತ್ತು ಶಾಲಾ ಕೊಠಡಿಗೆ ಬಿಡುಗಡೆಯಾದ ಅನುದಾನ ನಿರುಪಯುಕ್ತವಾಗಬಾರದು ಎಂಬ ಉದ್ದೇಶದಿಂದ ಈಗಾಗಲೇ ಶಾಲೆಗಾಗಿ ಕಾಯ್ದಿರಿಸಿದ ನಿವೇಶನದಲ್ಲಿ ಕಾಮಗಾರಿ ಪ್ರಾರಂಭಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ಸಿಂದಗಿ ರವರಿಗೆ ಪತ್ರ ಬರೆಯಲಾಗಿದೆ ಎಂದು ನಮೂದಿಸಿರುತ್ತಾರೆ.

6. 4ನೇ ಎದುರುದಾರರಿಗೆ ಕಳುಹಿಸಿದ ಲಕೋಟೆಯು ದಿನಾಂಕ: 09/10/2019 ರಂದು ತಲುಪಿದ್ದು ಆಕ್ಷೇಪಣೆಗಳನ್ನು ಸಲ್ಲಿಸಿರುವುದಿಲ್ಲ.

7. ತನಿಖಾ ಹಂತದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿರುತ್ತದೆ.

8. ಶಾಲೆಗಾಗಿ ಮೀಸಲಿಟ್ಟ ಆಸ್ತಿ ನಂ. 306 ಸ್ವತ್ತಿಗೆ ಸಂಬಂಧಪಟ್ಟ ತೆರಿಗೆ ನಿರ್ಧಾರಣಾ ಪಟ್ಟಿ ಪ್ರತಿ, ಶಾಲೆಯ ಆಸ್ತಿ ಧೃಡೀಕರಣ ಪತ್ರದ ಪ್ರತಿ, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯವರು ಅನುಮೋದಿಸಿದ ಪುನರ್ ವಸತಿ ಯೋಜನೆಯ ನಕ್ಷೆ ಪ್ರತಿಗಳನ್ನು ತನಿಖಾ ಅವಧಿಯಲ್ಲಿ ಸಂಗ್ರಹಿಸಲಾಗಿದೆ.

9. ಸಿಂದಗಿ ತಾಲ್ಲೂಕು, ವಿಭೂತಿಹಳ್ಳಿ ಗ್ರಾಮದ ಪುನರ್ವಸತಿ ಯೋಜನೆಗಾಗಿ ವಿಭೂತಿ ಹಳ್ಳಿ ಸರ್ವೆ ನಂ: 44/1, 44/2ಬ1, 44/2ಬ2, ಮತ್ತು 44/2ಬ3 ರಲ್ಲಿ ಒಟ್ಟು 17 ಎಕರೆ– 19 ಗುಂಟೆ ಜಮೀನಿನಲ್ಲಿ ವಸತಿ ಯೋಜನೆಯು ದಿನಾಂಕ: 22/11/2009 ರಂದು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿಯಲ್ಲಿ

N. Ananth

ತಯಾರಾಗಿದ್ದು ಶಾಲೆ ಮತ್ತು ಆಟದ ಮೈದಾನಕ್ಕೆಂದು ನಿರ್ದಿಷ್ಟ ಜಾಗ ಮೀಸಲಿಟ್ಟಿರುವುದು ನಕ್ಷೆಯಲ್ಲಿ ಕಂಡುಬಂದಿರುತ್ತದೆ.

10. ಸದರಿ ನಕ್ಷೆಯಲ್ಲಿ ಶಾಲೆ ಮತ್ತು ಆಡದ ಮೈದಾನ ಎಂದು ಗುರುತಿಸಿದ್ದು ಮೀಸಲಿಟ್ಟ ಜಾಗವನ್ನು ಶಾಲೆ ನಿರ್ಮಿಸಲು ಉಪಯೋಗಿಸಬೇಕಿರುತ್ತದೆ.

11. ಗ್ರಾಮದ ಹಳೆ ಶಾಲೆಗೆ ಹೋಗಲು ಮಕ್ಕಳು 2 ಕಿ.ಮೀ. ನಡೆದುಹೋಗುತ್ತಿದ್ದು ಮಕ್ಕಳಿಗೆ ಆಗುತ್ತಿರುವ ತೊಂದರೆ ನಿವಾರಿಸುವುದು ಅಗತ್ಯವಾಗಿರುತ್ತದೆ. ಶಾಲೆ ನಿರ್ಮಿಸಲು ಸರ್ಕಾರದ ಅನುಧಾನವೂ ಬಿಡುಗಡೆಯಾಗಿರುವ ಬಗ್ಗೆ ಮಾಹಿತಿ ಸಲ್ಲಿಸಿರುತ್ತಾರೆ.

12. ಮೇಲೆ ನಮೂದಿಸಿದ ಕಾರಣಗಳಿಂದ ಹಾಗೂ ಕಡತದಲ್ಲಿನ ಆಧಾರಗಳಿಂದ, ವಿಭೂತಿ ಗ್ರಾಮವು ಪುನರ್ವಸತಿ ಗ್ರಾಮವಾಗಿರುವುದರಿಂದ ಆಸ್ತಿ ನಂ. 306 ರಲ್ಲಿ 200 X 100 ಅಡಿ ನಿವೇಶನವನ್ನು ಶಾಲೆಗಾಗಿ ಕಾಯ್ದಿರಿಸಿದ್ದು ಸದರಿ ಮೀಸಲಿಟ್ಟ ಜಾಗದಲ್ಲಿಯೇ ಶಾಲೆಯನ್ನು ನಿರ್ಮಿಸಲು ನಿಯಮಾನುಸಾರ ಅಗತ್ಯ ಕ್ರಮ ಜರುಗಿಸಿ ತೆಗೆದುಕೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸುವಂತೆ ಸೂಚಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

13. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 5/12

[ನ್ಯಾಯಮೂರ್ತಿ ಎನ್. ಆನಂದ]

ಉಪಲೋಕಾಯುಕ್ತರು,

ಕರ್ನಾಟಕ ರಾಜ್ಯ, ಬೆಂಗಳೂರು.